JANUARY 04, 2026

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಮುಖ್ಯಾಂಶಗಳು

<><><>

- ಅಂಗಾಂಗ ದಾನದಲ್ಲಿ, ಕರ್ನಾಟಕ, 2025ನೇ ಸಾಲಿನಲ್ಲಿ, ದೇಶಕ್ಕೆ 3ನೇ ಸ್ಥಾನ.
- ಹುಬ್ಬಳ್ಳಿಯ ಅಮರಗೋಳದಲ್ಲಿ, ಎಂ.ಎಸ್.ಎಂ.ಇ. ವಿವಿಧೋದ್ದೇಶ ಕೇಂದ್ರದ ಸ್ಥಾಪನೆಗೆ, ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆ, ಮನವಿ.
- ಕರ್ನಾಟಕದ ಮೊದಲ, ಅಪರೂಪದ 'ಚಂದನ ಚಿರತೆ', ವಿಜಯನಗರದಲ್ಲಿ, ಗೋಚರ.
- ಇಂದು, ವಿಶ್ವ ಬ್ರೈಲ್ ಲಿಪಿ ದಿನಾಚರಣೆ.

<><><>

ಈಗ ವಾರ್ತೆಗಳ ವಿವರ

<><><>

ಅಂಗಾಂಗ ದಾನದಲ್ಲಿ, ಕರ್ನಾಟಕ ರಾಜ್ಯ, ಕಳೆದ 2025 ನೇ ಸಾಲಿಗೆ, ದೇಶಕ್ಕೆ 3ನೇ ಸ್ಥಾನ ಪಡೆದಿದೆ. 198 ದಾನಿಗಳಿಂದ, 564 ಅಂಗಾಂಗಗಳನ್ನು ಕಸಿ ಮಾಡಿ, ನೂರಾರು ಜೀವಗಳಿಗೆ ಮರುಜನ್ಮ ದೊರಕಿದೆ. ಆರೋಗ್ಯ ಖಾತೆ ಸಚಿವ ದಿನೇಶ ಗುಂಡೂರಾವ, ಎಕ್ಸ್ ಮಾಧ್ಯಮದಲ್ಲಿ ಮಾಹಿತಿ ನೀಡಿ, 306 ಮೂತ್ರ ಜನಕಾಂಗ, 167 ಜಠರ, 50 ಹೃದಯ, 29 ಶ್ವಾಸಕೋಶ ಹಾಗೂ 288 ಕಣ್ಣುಗಳನ್ನು, 198 ದಾನಿಗಳಿಂದ ಪಡೆದು, ಅಂಗಾಂಗ ಕಸಿ ಮಾಡಲಾಗಿದೆ, ಎಂದಿದ್ದಾರೆ. ಅಂಗಾಂಗ ದಾನ, ಜೀವದಾನ. 'ಜೀವಸಾರ್ಥಕತೆ' ಯೋಜನೆಗೆ ಕೈಜೋಡಿಸಿ, ಸಾವಿನ ನಂತರವೂ, ಜೀವಂತವಿರೋಣ ಹಾಗೂ ಜೀವ ಉಳಿಸೋಣ ಎಂದು ಸಚಿವರು ಕರೆ ನೀಡಿದ್ದಾರೆ.

<><><>

ಧಾರವಾಡ ಜಿಲ್ಲೆ, ಹುಬ್ಬಳ್ಳಿಯ, ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆ, ಉತ್ತರ ಕರ್ನಾಟಕ ಭಾಗದಲ್ಲಿ, ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಸಮಗ್ರ ಅಭಿವೃದ್ಧಿಗಾಗಿ, ಎಂ.ಎಸ್.ಎಂ.ಇ. ಸೌಲಭ್ಯ ಮತ್ತು ತರಬೇತಿ ಹಾಗೂ ವಿವಿಧೋದ್ದೇಶ ವಸ್ತು ಪ್ರದರ್ಶನ ಕೇಂದ್ರವನ್ನು, ಅಮರಗೋಳದಲ್ಲಿ ಸ್ಥಾಪಿಸುವಂತೆ, ಕೇಂದ್ರ ಸಚಿವರಾದ ಶೋಭಾ ಕರಂದ್ಲಾಜೆ ಅವರಿಗೆ, ಮನವಿ ಮಾಡಿದೆ.

ಅತ್ಯಾಧುನಿಕ M.S.M.E. Facilitation and Training Centre ಸ್ಥಾಪನೆಗಾಗಿ, 5 ಕೋಟಿ ರೂಪಾಯಿ ಅನುದಾನ ನೀಡಿ, 9 ಎಕರೆ ಪ್ರದೇಶದಲ್ಲಿ, ಹುಬ್ಬಳ್ಳಿ ಧಾರವಾಡ ವಿವಿಧೋದ್ದೇಶ ಪ್ರದರ್ಶನ ಕೇಂದ್ರ ಸ್ಥಾಪಿಸಿ, ಕಿತ್ತೂರು ಕರ್ನಾಟಕದ ಉದ್ಯಮಿಗಳಿಗೆ ಅನುಕೂಲ ಕಲ್ಪಿಸಲು, ಕೋರಿದೆ. ಇನ್‌ಕಾಮಕ್ಸ್ 2026, ರಾಷ್ಟ್ರೀಯ ಕೈಗಾರಿಕಾ ವಸ್ತು ಪ್ರದರ್ಶನಕ್ಕೆ, ಕೇಂದ್ರದಿಂದ ಅನುದಾನ ಒದಗಿಸುವಂತೆ ಮಾಡಿದ ಮನವಿಗೆ, ಸಚಿವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದು, ಸಂಸ್ಥೆಯ ಅಧ್ಯಕ್ಷ ಜಿ.ಕೆ. ಆದಪ್ಪಗೌಡರ ತಿಳಿಸಿದ್ದಾರೆ.

<><><>

'ಬೀಜದಿಂದ ಸಿದ್ಧ ಉತ್ಪನ್ನದ ವರೆಗೆ' ಸಮಗ್ರ ಗಮನ ಮತ್ತು 'ಸಿಲ್ಕ್ ಸಮಗ್ರ–2' ಅಡಿಯಲ್ಲಿ, ರೇಷ್ಮೆ ಕುರಿತು, ಅಂತಾರಾಜ್ಯ ಜ್ಞಾನ ವಿನಿಮಯದ ಪ್ರಾಮುಖ್ಯತೆಯನ್ನು ಮನಗಾಣಲಾಗಿದೆ ಎಂದು, ಕೇಂದ್ರ ಜವಳಿ ಸಚಿವಾಲಯದ, ಕೇಂದ್ರೀಯ ರೇಷ್ಮೆ ಮಂಡಳಿ ಜಂಟಿ ಕಾರ್ಯದರ್ಶಿ ಪದ್ಮಿನಿ ಸಿಂಗ್ಲಾ ತಿಳಿಸಿದ್ದಾರೆ. "ಸಮಗ್ರ ಬೆಳವಣಿಗೆಗಾಗಿ, ರೇ ್ಮೆ ಮೌಲ್ಯ ಸರಪಳಿಯ ಬಲವರ್ಧನೆ" ಧ್ಯೇಯದೊಂದಿಗೆ, ಬೆಂಗಳೂರಿನಲ್ಲಿ ಆಯೋಜಿತ, ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ ನಿರ್ದೇಶಕರ, ಎರಡು ದಿನಗಳ, ಸಮ್ಮೇಳನದಲ್ಲಿ ಅವರು ಮಾತನಾಡಿದರು.

<><><>

ಕರ್ನಾಟಕ ಸರ್ಕಾರದ ರೇ ್ಮೆ ಇಲಾಖೆ ಕಾರ್ಯದರ್ಶಿ ಆರ್.ಗಿರೀಶ ಮಾತನಾಡಿ, ರಾಜ್ಯದ ಗ್ರಾಮೀಣ ಆರ್ಥಿಕತೆಯಲ್ಲಿ, ರೇ ್ಮೆ ಕೃಷಿ ಅವಿಭಾಜ್ಯ ಅಂಗವಾಗಿದೆ. ದ್ವಿತಳಿ ರೇ ್ಮೆ ಉತ್ಪಾದನೆಯಲ್ಲಿ, ಕರ್ನಾಟಕ ಮುಂಚೂಣಿಯಲ್ಲಿದೆ ಎಂದರು.

<><><>

ಜವಳಿ ಸಚಿವಾಲಯದ ಕಾರ್ಯದರ್ಶಿ, ನೀಲಂ ಶಮಿ ರಾವ್ ಅವರು, 'ಸಿಲ್ಕ್ ಮಾರ್ಕ್' ದೃಢೀಕರಣದ ಪಾತ್ರ ಮತ್ತು ಜಮ್ಮು ಕಾಶ್ಮೀರದ 'ಸೆರಿ ಟೂರಿಸಂ' ನಂತಹ ಹೊಸ ಪ್ರಯತ್ನಗಳು ಶ್ಲಾಘನೀಯ ಎಂದರು.

<><><>

ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯಿತಿ ರಾಜ್ ಇಲಾಖೆ, ಎಲ್ಲ ಗ್ರಾಮ ಪಂಚಾಯಿತಿಗಳಲ್ಲಿ, ಮಕ್ಕಳ ಗ್ರಾಮ ಸಭೆಗಳನ್ನು ನಿಯಮಿತವಾಗಿ ನಡೆಸುವಂತೆ, ಸೂಚಿಸಿದೆ. ವಿಜಯನಗರ ಜಿಲ್ಲೆ, ಹೊಸಪೇಟೆ ತಾಲೂಕು,ಮಲಪನಗುಡಿ ಗ್ರಾಮ ಪಂಚಾಯಿತಿ, ವಿಶೇ ಚೇತನರಿಗಾಗಿ ವಿಶೇಷ ಗ್ರಾಮ ಸಭೆ ಆಯೋಜಿಸಿ, ಮಾದರಿಯಾಗಿದೆ. ಶೇಕಡ ಐದರ ಅನುದಾನದಲ್ಲಿ, ರೊಟ್ಟಿ ತಯಾರಿಕೆ ಕೇಂದ್ರ ಕಾರ್ಯಾರಂಭಿಸಿದೆ. ವಿಶೇಷಚೇತನರು, ಸ್ವಾವಲಂಬಿಯಾಗಿ ಬದುಕು ಕಟ್ಟಿಕೊಳ್ಳುವ ನಿಟ್ಟಿನಲ್ಲಿ, ಮಲಪನಗುಡಿ ಗ್ರಾಮ ಪಂಚಾಯಿತಿ ಕೈಗೊಂಡ ಕ್ರಮಗಳ ಕುರಿತು, ಮಾಹಿತಿ ನೀಡಿದ್ದಾರೆ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಹನುಮಂತಪ್ಪ ಕಂಬಾರ.

<><><>

ಹನುಮಂತಪ್ಪ ಕಂಬಾರ ಧ್ವನಿ 38 ಸೆಕೆಂದುಗಳು

<><><>

ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..

(40 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ವಿಜಯನಗರ ಜಿಲ್ಲೆಯಲ್ಲಿ, ಮೊಟ್ಟ ಮೊದಲ ಬಾರಿಗೆ, ಹೊಳೆಮತ್ತಿ ನೇಚರ್ ಫೌಂಡೇಶನ್ ಸಂಸ್ಥಾಪಕ ಅಧ್ಯಕ್ಷ, ಸಂಜಯ ಗುಬ್ಬಿ ನೇತೃತ್ವದ, ವನ್ಯಜೀವಿ ಸಂಶೋಧಕರ ತಂಡ, ಅಪರೂಪದ, ವಿಶೇ ´ ಬಣ್ಣದ, ಚಿರತೆಯನ್ನು ದಾಖಲಿಸಿದ್ದು, ಚಂದನ ಚಿರತೆ ಎಂದು ನಾಮಕರಣ ಮಾಡಿದೆ. ಕರ್ನಾಟಕದಲ್ಲಿ ಮೊದಲ ಹಾಗೂ ದೇಶದಲ್ಲೇ, 'ಸ್ಯಾಂಡಲ್‌ವುಡ್ ಲೆಪರ್ಡ್' ಅಥವಾ ಸ್ಟ್ರಾ ಬೆರ್ರಿ ಲೆಪರ್ಡ್' ಎರಡನೇ ಬಾರಿ, ದಾಖಲಾಗಿದೆ. ಕಳೆದ 2021ರ ನವೆಂಬರ್‌ನಲ್ಲಿ, ರಾಜಸ್ಥಾನದ ರಣಕಪುರದಲ್ಲಿ ಚಂದನ ಚಿರತೆಯನ್ನು ದಾಖಲಿಸಲಾಗಿತ್ತು. ಚಿರತೆಯಲ್ಲಿ 'ಹೈಪೊ ಮೆಲನಿಸಮ್' ಅಥವಾ 'ಎರಿತ್ರಿಸಮ್' ಎನ್ನುವ, ಆನುವಂಶಿಕ ಸ್ಥಿತಿಯಿಂದ, ಈ ಬಣ್ಣ ಬರುತ್ತದೆ.

<><><>

ಪ್ರದೇಶ ಸಮಾಚಾರಕ್ಕಾಗಿ ಹೆಚ್ಚಿನ ಮಾಹಿತಿ ನೀಡಿದ್ದಾರೆ, ಖ್ಯಾತ ವನ್ಯಜೀವಿ ತಜ್ಞ, ಸಂಜಯ ಗುಬ್ಬಿ.

<><><>

ಸಂಜಯ ಗುಬ್ಬಿ ಧ್ವನಿ 48 ಸೆಕೆಂದುಗಳು

<><><>

ಸ್ವಚ್ಛ ಭಾರತ ಅಭಿಯಾನ ಹಾಗೂ ಸ್ವಚ್ಛತಾ ಹೀ ಸೇವಾ ಉಪಕ್ರಮದಡಿ, ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯ, ಹುಬ್ಬಳ್ಳಿ ವಿಭಾಗದ, ವಾರ್ಡ್ ಸಂಖ್ಯೆ 47ರಲ್ಲಿ, ಪಾಲಿಕೆ ಸದಸ್ಯೆ ರೂಪಾ ಶೆಟ್ಟಿ, ಸ್ವತಃ ಕಸ ಸಾಗಣೆ ಟಿಪ್ಪರ್ ಏರಿ, ವಿವಿಧ ಮನೆಗಳಿಂದ ಸಂಗ್ರಹಿಸುವ, ಹಸಿ ಮತ್ತು ಒಣ ತ್ಯಾಜ್ಯವನ್ನು ಪರಿಶೀಲಿಸಿದರು. ಇಂದೋರ್ ಅಧ್ಯಯನ ಪ್ರವಾಸದ ಅನುಭವಗಳನ್ನು ಹಂಚಿಕೊಂಡ ಅವರು, ಜನ ಸಹಭಾಗಿತ್ವದಲ್ಲಿ, ಮೂಲದಲ್ಲೇ ವೈಜ್ಞಾನಿಕವಾಗಿ ಕಸ ವಿಂಗಡಿಸುವ ಪರಿ ಬಗ್ಗೆ, ಜನರಿಗೆ ವಿವರಿಸಿದರು.

<><><>

ನಾಮ ನಿರ್ದೇಶಿತ ಪಾಲಿಕೆ ಸದಸ್ಯ ತುಳಸಪ್ಪ ಪೂಜಾರ, ವಲಯ ಕಚೇರಿ 12ರ ವ್ಯಾಪ್ತಿಯ, ವಾರ್ಡ್ ಸಂಖ್ಯೆ 17 ರಲ್ಲಿ, ಗೋಸಾವಿ ಓಣಿಯ ಪ್ರತಿ ಮನೆಗೆ ಭೇಟಿ ನೀಡಿ, ಹಸಿ ಕಸ, ಒಣ ಕಸ ಹಾಗೂ ಘನ ತ್ಯಾಜ್ಯ ಬೇರ್ಪಡಿಸುವ ಬಗ್ಗೆ, ಪ್ರಾತ್ಯಕ್ಷಿಕೆ ನೀಡಿ, ಪೌರಕಾರ್ಮಿಕರ ಆರೋಗ್ಯ ಕಾಪಾಡೋಣ ಎಂದರು.

<><><>

'ಅಮೃತ ಭಾರತ' ಯೋಜನೆ ಅಡಿ, ರೈಲು ನಿಲ್ದಾಣಗಳನ್ನು ಮೇಲ್ದರ್ಜೆಗೇರಿಸುವ ಕಾಮಗಾರಿಯ ಪ್ರಗತಿ, ಹುಬ್ಬಳ್ಳಿ–ಅಂಕೋಲಾ, ತುಮಕೂರು–ಚಿತ್ರದುರ್ಗ–ದಾವಣಗೆರೆ ಹಾಗೂ ಬಾಗಲಕೋಟೆ–ಕುಡಚಿ, ಹೊಸ ರೈಲು ಮಾರ್ಗಗಳ ಕಾಮಗಾರಿಯನ್ನು, ಕೇಂದ್ರ ನವ ಹಾಗೂ ನವೀಕರಿಸಬಹುದಾದ ಇಂಧನಗಳ ಖಾತೆ ಸಚಿವ ಪ್ರಲ್ಹಾದ ಜೋಶಿ, ಪರಿಶೀಲಿಸಿದರು. ಹುಬ್ಬಳ್ಳಿಯ ನೈಋತ್ಯ ರೇಲ್ವೆ ವಲಯದ ಮಹಾ ಪ್ರಬಂಧಕರ ಕಚೇರಿಯಲ್ಲಿ, ಹಿರಿಯ ಅಧಿಕಾರಿಗಳೊಂದಿಗೆ, ಅವರು ಸಭೆ ನಡೆಸಿದರು. ಹುಬ್ಬಳ್ಳಿಯಲ್ಲಿ 'ಮೆಗಾ ಟರ್ಮಿನಲ್' ನಿರ್ಮಾಣ, ಕುಸುಗಲ್–ಅಮರಗೋಳ ರೇಲ್ವೆ ಬೈಪಾಸ್ ಲೈನ್‌ನ ಸರ್ವಿಸ್ ರಸ್ತೆ ಸಮಸ್ಯೆ, ಶಿಶುವಿನಹಳ್ಳಿ–ಅಣ್ಣಿಗೇರಿ–ಹುಲಕೋಟಿ ಮಾರ್ಗದ ಪ್ರಯಾಣಿಕರ ಅನುಕೂಲಕ್ಕಾಗಿ, ಧಾರವಾಡ–ಗದಗ ನಡುವೆ ಪ್ಯಾಸೆಂಜರ್ ರೈಲುಗಳ ಸಂಚಾರ ಪ್ರಾರಂಭಿಸಲು, ಸಚಿವ ಜೋಶಿ ಚರ್ಚಿಸಿದರು.

<><><>

9ನೇ ಶತಮಾನದ, ಬ್ರೈಲ್ ಲಿಪಿ ಸಂಶೋಧಕ, ಫ್ರಾನ್ಸ್‌ನ ಲೂಯಿಸ್ ಬ್ರೈಲ್ ಅವರ ಜನ್ಮದಿನವಾದ ಇಂದು, ವಿಶ್ವ ಬ್ರೈಲ್ ಲಿಪಿ ದಿನಾಚರಣೆ. ದೃಷ್ಟಿ ವಿಶೇಷಚೇತನರು ಮತ್ತು ಭಾಗಶಃ ದೃಷ್ಟಿಹೀನರ, ಸಂವಹನ ಸಾಧನವಾಗಿ, ಬ್ರೈಲ್ ಲಿಪಿ ಮಹತ್ವದ ಬಗ್ಗೆ ಜಾಗೃತಿ ಮೂಡಿಸಲು, ವಿಶ್ವ ಬ್ರೈಲ್ ದಿನವನ್ನು, ಆಚರಿಸಲಾಗುತ್ತದೆ. ಬ್ರೈಲ್ ಲಿಪಿ, ವರ್ಣಮಾಲೆ, ಸಂಖ್ಯಾತ್ಮಕ ಚಿನ್ಹೆಗಳ ಸ್ಪರ್ಷ ಪ್ರಾತಿನಿಧ್ಯತೆ

ಹೊಂದಿದ್ದು, ಪ್ರತಿ ಅಕ್ಷರ ಮತ್ತು ಸಂಖ್ಯೆಯನ್ನು ಪ್ರತಿನಿಧಿಸಲು, ಆರು ಬಿಂದುಗಳು, ಸಂಗೀತ, ಗಣಿತ ಮತ್ತು ವೈಜ್ಞಾನಿಕ ಚಿನ್ಹೆಗಳನ್ನು ಹೊಂದಿದೆ.

<><><>

ಕರ್ನಾಟಕ ಚಿತ್ರಕಲಾ ಪರಿಷತ್ತು, 23ನೇ ಚಿತ್ರ ಸಂತೆಯನ್ನು ಇಂದುಬೆಳಗ್ಗೆ 10.30ಕ್ಕೆ ಬೆಂಗಳೂರಿನ ಚಿತ್ರಕಲಾ ಪರಿಷತ್‌ನಲ್ಲಿ ಆಯೋಜಿಸಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಲಿದ್ದು, ಕಲಾ ಪ್ರದರ್ಶನಕ್ಕೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಚಾಲನೆ ನೀಡಲಿದ್ದಾರೆ.

<><><>

ಬಾಗಲಕೋಟೆ ತೋಟಗಾರಿಕಾ ವಿಶ್ವವಿದ್ಯಾಲಯ, ನಾಡಿದ್ದು 6ನೇ ತಾರೀಖಿನಿಂದ, 3 ದಿನಗಳ, ತರಕಾರಿ, ಹೂವು ಹಾಗೂ ಮೆಣಸಿನಕಾಯಿ ಬೆಳೆಗಳ ಕ್ಷೇತ್ರೋತ್ಸವ ಆಯೋಜಿಸಿದೆ. ತೋಟಗಾರಿಕಾ ವಿಶ್ವವಿದ್ಯಾಲಯದ, ವಿಸ್ತರಣಾ ನಿರ್ದೇಶನಾಲಯದ, ತರಬೇತಿ ಕೇಂದ್ರದಲ್ಲಿ ಹಾಗೂ 7ನೇ ತಾರೀಖು, ಬಾಗಲಕೋಟೆ ಜಿಲ್ಲೆ, ಹಳ್ಳೂರು ಗ್ರಾಮದ ಕೃಷಿಕ ಉಮೇಶ ಸಜ್ಜನ ಅವರ, ಜಮೀನಿನಲ್ಲಿ ಕ್ಷೇತ್ರೋತ್ಸವ ನಡೆಯಲಿದೆ ಎಂದು, ವಿಸ್ತರಣಾ ನಿರ್ದೇಶಕ ಡಿ.ಎಲ್. ರುದ್ರೇಶ ತಿಳಿಸಿದ್ದಾರೆ.

<><><>

ಧಾರವಾಡದ ರಂಗಾಯಣ, ಪಂಡಿತ ಬಸವರಾಜ ರಾಜಗುರು ಬಯಲು ರಂಗಮಂದಿರದಲ್ಲಿ, ರಂಗಾಯಣ ನಾಟಕೋತ್ಸವ ಹಾಗೂ ಗಾಂಧಿ ಭಾರತ, ಐತಿಹಾಸಿಕ ಭಾವಚಿತ್ರಗಳ ಪ್ರದರ್ಶನ ಆಯೋಜಿಸಿದೆ. ನಿನ್ನೆ 2ನೇ ದಿನ, ಬಿ.ಆರ್ ವೆಂಕಟರಮಣ ಐತಾಳ ನಿರ್ದೇಶಿಸಿದ, ಎಂ.ಎಸ್.ಕೆ ಪ್ರಭು ಕನ್ನಡಕ್ಕೆ ಭಾಷಾಂತರಿಸಿದ, "ಗುಲಾಮನ ಸ್ವಾತಂತ್ರ್ಯ ಯಾತ್ರೆ" ನಾಟಕವನ್ನು, ಕಾರ್ಕಳ ರಂಗಾಯಣದ, ಯಕ್ಷ ರೆಪರ್ಟರಿ ಕಲಾವಿದರು ಪ್ರಸ್ತುತ ಪಡಿಸಿದರು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಅಂಗಾಂಗ ದಾನದಲ್ಲಿ, ಕರ್ನಾಟಕ, 2025ನೇ ಸಾಲಿನಲ್ಲಿ, ದೇಶಕ್ಕೆ 3ನೇ ಸ್ಥಾನ.
- ಹುಬ್ಬಳ್ಳಿಯ ಅಮರಗೋಳದಲ್ಲಿ, ಎಂ.ಎಸ್.ಎಂ.ಇ. ವಿವಿಧೋದ್ದೇಶ ಕೇಂದ್ರದ ಸ್ಥಾಪನೆಗೆ, ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆ, ಮನವಿ.
- ಕರ್ನಾಟಕದ ಮೊದಲ, ಅಪರೂಪದ 'ಚಂದನ ಚಿರತೆ', ವಿಜಯನಗರದಲ್ಲಿ, ಗೋಚರ.
- ಇಂದು, ವಿಶ್ವ ಬ್ರೈಲ್ ದಿನಾಚರಣೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>